ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ಕಾರಿಯವರ ನ್ಯಾಯಾಲಯ,
ಕೊಡಗು, ಮಡಿಕೇರಿ
ಎಫ್‌ಡಿಪಿ ನಂಃ ೬ಃ೧೩

ಪಿಡಬ್ಲ್ಯು- ३

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಕೃಷ್ಣ ಪ್ರಸಾದ್ |
| ತಂದೆಯ ಹೆಸರು | ಃ | ಶ್ರೀನಿವಾಸ್ ಅಯ್ಯಂಗಾರ್ |
| ವಯಸ್ಸು | ಃ | ೪೫ ವರ್ಷ |
| ವೃತ್ತಿ | ಃ | ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಪದನಿಮಿತ್ತ ಭೂ ದಾಖಲೆಗಳ ಉಪ ನಿರ್ದೇಶಕರು, ಜಿಲ್ಲಾಧಿಕಾರಿಗಳ ಕಚೇರಿ, ಕೊಡಗು |
| ವಾಸಸ್ಥಳ | ಃ | ಹಾಸನ |

ದಿಃ ೨೨-೦೪-೨೦೧೭ ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ. ಸಿಎಂಕೆ ವಕೀಲರಿಂದಃ-

ನಾನು ಈ ಗ ಹಾಲಿ ಮಡಿಕೇರಿಯ ಪ್ರಭಾರ ಭೂ ದಾಖಲೆಗಳ ಉಪನಿರ್ದೇಶಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ದಾವೆಯಲ್ಲಿ ದಸ್ತಾವೇಜನ್ನು ಹಾಜರು ಪಡಿಸಲು ಸಮನ್ಸ್ ಬಂದಿರುತ್ತದೆ , ಆ ದಾಖಲೆ ಎಡಿಎಲ್‌ಆರ್/ಡಿಪಿಆರ್/೧೦೭-೯೩-೯೪ ಆಗಿರುತ್ತದೆ. ಆ ಕಡತ ಈಗ ತಾಲ್ಲೂಕು ಕಚೇರಿಯಲ್ಲಿ ಇರುತ್ತದೆ.

ಪಾಟೀ ಸವಾಲು ಃ ಶ್ರೀ. ಸಿಎಂಕೆ ವಕೀಲರಿಂದ:-

ರೇ ಹಿಂದಿನ ತಹಶೀಲ್ದಾರ್‌ರವರಾದ ಶ್ರೀಮತಿ ಕುಂಜ್ಞಮ್ಮನವರು ಸಾಗುವಳಿ ಚೀಟಿಯಲ್ಲಿ ನಮೂದಾದ ಕಡತ ಸಂಖ್ಯೆ ಎಡಿಎಲ್‌ಆರ್/ಡಿಪಿಆರ್/೧೦೭/೯೩-೯೪ ಕಡತ ಡಿಡಿಎಲ್‌ಆರ್‌ರವರ ಕಚೇರಿಯಲ್ಲಿ ಇರುತ್ತದೆ ಎಂದು ನುಡಿದಿರುತ್ತಾರೆ ಅದಕ್ಕೆ ನೀವೇನು

ಹೇಳುತ್ತೀರಿ ಎಂದರೆ ಸಾಕ್ಷಿ ದಿಃ ೦೫-೦೯-೨೦೧೨ ರಲ್ಲಿ ತಾಲ್ಲೂಕು ಕಚೇರಿಯ ಸರ್ವೆ ತಪಾಸಕರು ೧ ರಿಂದ ೫ ಎಂದು ನಮೂನೆಗಳಿದ್ದು ಅವುಗಳನ್ನು ತಹಶೀಲ್ದಾರ್‌ರವರು ಭರ್ತಿ ಮಾಡಿ ನಮ್ಮ ಕಚೇರಿಗೆ ಕಳುಹಿಸಲು ತಹಶೀಲ್ ಕಚೇರಿಗೆ ಕಳುಹಿಸಿಕೊಟ್ಟಿರುತ್ತೇವೆ.

ನಿಮ್ಮ ಪ್ರಕಾರ ಸಾಗುವಳಿ ಚೀಟಿಯಲ್ಲಿ ನಮೂದಾದ ಪೋಡಿ ದುರಸ್ತಿಯಲ್ಲಿ ಎಂದರೆ ಏನು ಎಂದರೆ ಸಾಕ್ಷಿ ಪೈಸಾರಿ ಜಾಗವನ್ನು ಗ್ರ್ಯಾಂಟ್ ಮಾಡಿದಾಗ ಮೂಲ ದಾಖಲೆಗಳಾದ ಸಾಗುವಳಿ ಚೀಟಿ, ಒಎಂ(ಕಚೇರಿ ಸುತ್ತೋಲೆ), ರೆವಿನ್ಯೂ ಸ್ಕೆಚ್ ಈ ಎಲ್ಲಾ ಮೂಲ ದಾಖಲೆಗಳನ್ನು ಪರಿಶೀಲಿಸಿ ೧ ರಿಂದ ೫ ನಮೂನೆಗಳನ್ನು ಭರ್ತಿ ಮಾಡಿ ಎಸಿ ರವರಿಗೆ ಕಳುಹಿಸಿ ಕೊಡಬೇಕಾಗುತ್ತದೆ. ನಂತರ ಎಸಿ ರವರು ಪರಿಶೀಲಿಸಿ ಡಿಡಿಎಲ್‌ಆರ್‌ರವರಿಗೆ ಸಹಿ ಮಾಡಿ ಕಳುಹಿಸಿಕೊಡುತ್ತಾರೆ. ನಂತರ ಡಿಡಿಎಲ್‌ಆರ್ ರವರು ಮೂಲ ದಾಖಲೆಗಳನ್ನು ಖಚಿತ ಪಡಿಸಿಕೊಂಡು ದುರಸ್ಥಿಗೆ ಆದೇಶ ಮಾಡುತ್ತಾರೆ.

ನಿಪಿ-೭ ಸಾಗುವಳಿ ಚೀಟಿಯಲ್ಲಿ ನಮೂದಿಸಿರುವ ಸರ್ವೆ ನಂ.೯೯/೨೫ ಹೇಗೆ ನೀಡಿದಿರಿ ಎಂದರೆ ಸಾಕ್ಷಿ ಸರ್ವೆ ನಂ. ೯೯ ರ ಬ್ಲಾಕ್ ನಂಬರಾಗಿ ೨೫ ನ್ನು ನಾವು ಸ್ವಾದೀನಾನುಭವದಲ್ಲಿರುವ ವ್ಯಕ್ತಿಗೆ ತಾತ್ಕಾಲಿಕವಾಗಿ ನೀಡಿರುವಂತಹ ನಂಬರಾಗಿದೆ ಎಂದು ನುಡಿಯುತ್ತಾರೆ.

ಸರ್ಕಾರದ ಸುತ್ತೋಲೆಯಂತೆ ೧ ರಿಂದ ೫ ರ ನಮೂನೆಗಳನ್ನು ಅಂದರೆ ಸರ್ವೆ ಮ್ಯಾನ್ಯುಯಲ್ಲಿರುವಂತಹ ನಮೂನೆಗಳನ್ನು ಭರ್ತಿ ಮಾಡಿ ನಮ್ಮ ಕಚೇರಿಗೆ ಕಳುಹಿಸಿದ ಪಕ್ಷದಲ್ಲಿ ದುರಸ್ತಿ ಮಾಡಿ ಗ್ರಾಮ ನಕಾಶೆಯಲ್ಲಿ ಇಂಡೀಕರಣ ಮಾಡಬಹುದಾಗಿರುತ್ತದೆ.

ದಿಃ ೧೮-೦೭-೨೦೧೬ ರಂದು ಸರ್ಕಾರವು ಹೊರಡಿಸಿರುವ ತಿದ್ದುಪಡಿ ಸುತ್ತೋಲೆ ಸಂಖ್ಯೆ ಕಂ.ಇ ೦೮ ಎಲ್.ಜಿ.ಪಿ.೨೦೧೬(ಭಾಗ-೧) ರ ಪ್ರಕಾರ ತಹಶೀಲ್ದಾರ್‌ರವರು ಏಕ ವ್ಯಕ್ತಿಗೆ ದುರಸ್ತಿ ಮಾಡಲು ಕಚೇರಿ ಆದೇಶ ಮಾಡುವ ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ. ಆ ಅಧಿಕಾರ ವ್ಯಾಪ್ತಿಯನ್ನು ಅವರು ಬಳಸಿ ಮೂರು ತಿಂಗಳ ಒಳಗಾಗಿ ಏಕ ವ್ಯಕ್ತಿ ದುರಸ್ತಿ ಕಾರ್ಯ ಮಾಡಬಹುದಾಗಿರುತ್ತದೆ. ಸಂಬಂದಪಟ್ಟ ವ್ಯಕ್ತಿ ಅರ್ಜಿ ಸಲ್ಲಿಸಿದ್ದ ಪಕ್ಷದಲ್ಲಿ ಅಥವಾ

ನ್ಯಾಯಾಲಯದ ನಿರ್ದೇಶನದ ಮೇರೆಗೆ ತಹಶೀಲ್ದಾರ್‌ರು ಮೇಲೆ ಹೇಳಿದ ದುರಸ್ತಿ ಆದೇಶ ಮಾಡಬಹುದಾಗಿರುತ್ತದೆ.

ಈಗ ಹಾಲಿ ಗ್ರಾಮ ನಕಾಶೆಯಲ್ಲಿ ಸರ್ವೆ ನಂ.೯/೨೫ ಯಾರಿಗಾದರು ಇಂಡೀಕರಣ ಮಾಡಿ ಕೊಡಲಾಗಿದೆಯೇ ಎಂದರೆ ಸಾಕ್ಷಿ ದಾಖಲೆಗಳನ್ನು ನೋಡಿ ಹೇಳಬೇಕು ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇಲ್ಲ.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-
ಜೆಎಂಎಫ್‌ಸಿ, ಮಡಿಕೇರಿ